ಪದ್ಯಪಲ್ಲವ



ವೈದೇಹಿ

# ಬದಲಾಗುವ ದೇವರುಗಳು

ಇಷ್ಟದ ಕವನಗಳು ಯಾವ್ಯಾವುವು, ಎಣಿಸುತ್ತಿದ್ದೇನೆ. ಸಾಲು ಮುಗಿಯುತ್ತಲೇ ಇಲ್ಲ. ಕವಿಗಳೆಂದೇ ಕರೆಸಿಕೊಳ್ಳದ ಕವಿಗಳ ನೂರಾರು ಹಾಡುಗಳ ಜೊತೆಗೆ ಆಧುನಿಕ ಕವಿಗಳು ರಚಿಸಿದ ಕವಿತೆಗಳು ಒಂದರ ಹಿಂದೊಂದು ನೆನಪಾಗುತ್ತಿವೆ. ಆಲಿಸಿದ ಕವಿತೆಗಳು, ಸಾಮಾನ್ಯವಾಗಿದ್ದೂ ಮಧುರ ರಾಗದೊಂದಿಗೆ ಒಳಸೇರಿಕೊಂಡ ಕವಿತೆಗಳು, ಹಾಡುತ್ತಾ ಅವತ್ತವತ್ತಿನ ಮನಸ್ಥಿತಿಗೆ ಸರಿಯಾಗಿ ಸಂತೈಸಿದ ಮುದಗೊಳಿಸಿದ ಹುರುಪು ತುಂಬಿದ ಕವಿತೆಗಳು– ಎಷ್ಟಂತ ಹೇಳಲಿ?. ಇವೆಲ್ಲವೂ ಮೊನ್ನೆಮೊನ್ನೆಯವರೆಗೆ ಬದುಕಿನ ದಾರಿಯಲ್ಲಿ ನನ್ನ ಜೊತೆಗೇ ಸಾಗಿ ಬಂದವು. ಈಗ ನೆನೆಯಹೋದರೆ ‘ಗಂಟಲಲ್ಲಿದೆ ಬಾಯಿಗೆ ಬಾರದು’ ಎನ್ನುತ್ತಾರಲ್ಲ ಹಾಗೆ ತೆಳುನೆನಪಿನ ಪರದೆ ಹೊದ್ದು ಮಲಗಿಯೇ ಬಿಟ್ಟಿವೆ. ಹೇಳಕೇಳದೆ ಒಮ್ಮೊಮ್ಮೆ ಧಡಕ್ಕನೆ ಕೆಲ ಸಾಲುಗಳು ನೆನಪಾಗುತ್ತವೆ, ಮಾಯವಾಗುತ್ತವೆ, ರಾಗ ಹೊರಡುತ್ತದೆ, ಅರ್ಧದಲ್ಲೇ ಕತ್ತು ಒತ್ತಿದಂತಾಗಿ ಸ್ತಬ್ಧವಾಗಿ ನಿಲ್ಲುತ್ತವೆ. ಅಮ್ಮಮ್ಮ! ನಿತ್ಯವೋ ಆಗಾಗವೋ ನೆನೆಯದೇ ಹೋದರೆ ವಯಸ್ಸು ಹೀಗೆಲ್ಲ ಅವುಗಳನ್ನು ಕದ್ದು ಮರೆಮಾಡಿ ಆಟವಾಡುತ್ತದೆಯೇ! ಅಥವಾ ವ್ಯಕ್ತಿಯ ಮನಸ್ಸಿಗೆ ಬೀಳುವ ವಿವಿಧ ಹೊಡೆತಗಳಿಂದ ಭಾವಸ್ನಾಯುಗಳು ಜಖಂ ಆಗುತ್ತವೆಯೇ?

ನಿಮ್ಮಿಷ್ಟದ ಕವನಗಳಲ್ಲಿ ಒಂದರ ಕುರಿತು ಬರೆಯಿರಿ ಎಂದಾಗ ಇದೆಲ್ಲ ನೆನಪಾಯಿತು. ವಿಮರ್ಶೆ ನನಗೆ ಒದಗಿ ಬಂದಿಲ್ಲವಾಗಿ ಅದರ ಸುದ್ದಿಯೇ ನನಗೆ ಬೇಡ. ಅದಾಗಲೇ ಹೇಳಿದಂತೆ ನನಗೆ ಅತ್ಯಂತ ಪ್ರಿಯರೂ ಆಪ್ತರೂ ಆದ ಕವಿಗಳ ಸಾಲುಸಾಲುಗಳೇ ಇವೆ. ಕವಯತ್ರಿಯರಂತೂ ಎಷ್ಟೊಂದು ಮಂದಿ! ಮೊನ್ನೆ ಮೊನ್ನೆ ಸುರುವಾದ ನಮ್ಮ ಆಧುನಿಕ ಸ್ತ್ರೀಕಾವ್ಯ ಲೋಕ ಎಷ್ಟೊಂದು ಅತ್ಯುತ್ತಮ ಕವಯತ್ರಿಯರನ್ನು ನೀಡಿದೆ! ಇಷ್ಟದ ಒಂದು ಕವನದ ಕುರಿತು ನನಗನಿಸುವುದನ್ನು ಹೇಳಬೇಕೆಂದರೆ ಯಾರನ್ನು ಯಾವುದನ್ನು ಆಯಲಿ, ಯಾರನ್ನು ಯಾವುದನ್ನು ಬಿಡಲಿ! ಎಂತಲೇ– ಒಂದು ಚೌಕಟ್ಟು ಹಾಕಿಕೊಂಡೆ. ಬಾಲ್ಯದಿಂದಲೂ ನನ್ನ ಒಡನಾಡಿಯಂತೆ ಅತ್ತಿತ್ತಗಲದೆ ನಡೆದುಬಂದು ಈಗಲೂ ಸಂದರ್ಭಕ್ಕೆ ಸರಿಯಾಗಿ ಮನಸ್ಸನ್ನು ತೀವ್ರ ಮೀಟುವ ಕವನವೊಂದನ್ನು ಆಯ್ದುಕೊಳ್ಳುವುದು ಖುಷಿಯೆನಿಸಿತು. ಚಂದ ರಾಗಕ್ಕೂ